# <u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ</u>

<u>ಸಿ. ಸಿ. ನಂ.*91/2023*</u>

**ಫಿರ್ಯಾದಿ** : ಸರ್ಕಾರದ ಪರವಾಗಿ ಚಿಂಚೋಳಿ ಅಬಕಾರಿ ಪೋಲೀಸರು.

- ವಿರುದ್ದ -

**ಆರೋಪಿ** :

ಬಕ್ಕಮ್ಮ ಗಂಡ ಹನುಮಂತ ಗಂಗನಪಳ್ಳಿ, 50 ವರ್ಷ, ಉಃ ಒಕ್ಕಲುತನ, ವಾಸಃ ಚಂದಾಪೂರ ವೆಂಕಟೇಶ್ವರ ನಗರ, ತಾಃ ಚಿಂಚೋಳಿ.

**ಃಃ<u>ದೋ ಷಾ ರೋ ಪ ಣೆ</u>ಃಃ**

ನಾನು ***ಶ್ರೀ ರವಿಕುಮಾರ ವಿ. ಬಿ.ಎಲ್. ಎಲ್‌ಎಲ್.ಬಿ.*** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿಯಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ,

- - -

ದಿನಾಂಕಃ 23-02-2022 ರಂದು ಮಧ್ಯಾಹ್ನ 02-30 ಗಂಟೆಯ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಚಂದಪೂರ ಗ್ರಾಮದ ವೆಂಕಟಪೂರ ನಗರದಲ್ಲಿ ಆರೋಪಿಯಾದ ನೀನು ಮನೆಯಲ್ಲಿ ಯಾವುದೇ ಅಧಿಕೃತ ಪರವಾನಿಗೆ ಪಡೆಯದೇ ಅನಧಿಕೃತವಾಗಿ ಕಾನೂನು ಬಾಹಿರವಾಗಿ 20 ಲೀಟರ ಸಾಮರ್ಥ್ಯದ 2 ಪ್ಲಾಸ್ಟಿಕ ಬಕೇಟಿನಲ್ಲಿ ಒಟ್ಟು ಅಂದಾಜು 40 ಲೀಟರ ಕಲಬೇರಿಕೆ ಸೇಂದಿ ಮಾರಾಟ ಮಾಡುತ್ತಿದ್ದ ಕಾರಣ, ಆರೋಪಿಯಾದ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀನು ಕಲಬೇರಿಕೆ ಸೇಂಧಿ ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪರವಾನಗಿ/ಅನುಮತಿಯನ್ನು ಪಡೆಯದೆ ನಿಗದಿತ ಪ್ರಮಾಣವನ್ನು ಮೀರಿದ ಮದ್ಯವನ್ನು ಸೂಕ್ತ ಪರವಾನಗಿ ಇಲ್ಲದೆ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಾಟ ಮಾಡುವ ಕಾರಣ,

ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

3. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತಯಾದ ನೀವು ಕಲಬೇರಿಕೆ ಸೇಂಧಿ ಸೇವನೆಯು ಮಾನವನ ಆರೋಗ್ಯಕ್ಕೆ ಹಾನಿಯಾಗುವುಂಟು ಮಾಡುತ್ತದೆ ಎಂದು ಗೊತ್ತಿದ್ದರೂ ಅದನ್ನು ಮಾರಾಟ ಮಾಡುವ ಉದ್ದೇಶದಿಂದ ಸ್ವಾಧೀನ ಹೊಂದಿ ಆ ಮೂಕಲ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ 273 ರ ರೀತಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕಃ 16-01-2024.

*(ಶ್ರೀ ರವಿಕುಮಾರ ವಿ.)*
*ಪ್ರಧಾನ ಪ್ರ.ದ.ನ್ಯಾ.ದಂಡಾಧಿಕಾರಿ,*
ಚಿಂಚೋಳಿ.